# ಬೆಸ್ಕಾಂ ಸ್ನೇಹಿ

ಬೆವಿಕಂ
BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-2, ಸಂಚಿಕೆ-2 | ತ್ರೈಮಾಸಿಕ, ಏಪ್ರಿಲ್-ಜೂನ್ 2015 | ಪುಟಗಳು-12

## ವಿದ್ಯುತ್ ಉಳಿಸಿ, ವಿಶ್ವ ರಕ್ಷಿಸಿ



## ವಿಶ್ವ ಭೂದಿನ
(ಏಪ್ರಿಲ್ 22)

- ಮ್ಯಾಜಿಕ್ ಮೀಟರ್
- ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸ್‌ದಾರರ ಷರತ್ತುಗಳು
- ಸೌರಶಕ್ತಿ ಮೇಲ್ಛಾವಣಿ

.....ಇನ್ನೂ ಹಲವು ವಿಷಯಗಳೊಂದಿಗೆ

ದಿನಾಂಕ 23.01.2015ರಂದು ಕನಕಪುರ ತಾಲ್ಲೂಕು, ಕಬ್ಬಾಳು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವಿವಿಧ ಕಛೇರಿ ಕಟ್ಟಡಗಳ ಶಂಕುಸ್ಥಾಪನೆಯನ್ನು ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಶ್ರೀ ಡಿ.ಕೆ. ಶಿವಕುಮಾರ್, ಇಂಧನ ಸಚಿವರು ನೆರವೇರಿಸಿದರು.














# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೆ,

ಈಗ ಬೇಸಿಗೆ ದಿನಗಳು ಎದುರಾಗುತ್ತಿವೆ. ಬೇಸಿಗೆ ಎಂದರೆ ವಿದ್ಯಾರ್ಥಿಗಳಿಗೆ ಪರೀಕ್ಷಾ ಕಾಲವಾದರೆ, ನಮಗೆ ಸಮರ್ಪಕ ವಿದ್ಯುತ್ ಪೂರೈಕೆಯ ಸವಾಲಿನ ಸಮಯ ಎಂದು ಭಾವಿಸಬೇಕು.

ಈ ಬಾರಿ, ಬೇಸಿಗೆಯಲ್ಲಿ ವಿದ್ಯುತ್ ಕೊರತೆ ಎದುರಾಗದಂತೆ ನೋಡಿಕೊಳ್ಳಬೇಕಾಗಿದೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಅತ್ಯಗತ್ಯ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಕರ್ತವ್ಯ ನಿರ್ವಹಣೆಯಲ್ಲಿ ತಾವೆಲ್ಲರೂ ಸಹಕರಿಸುತ್ತೀರಿ ಎಂದು ನಂಬಿದ್ದೇನೆ.

ವಿದ್ಯುತ್ ಬಿಲ್ ಪಾವತಿಗೆ ಸಂಬಂಧಿಸಿದಂತೆ, ಎ.ಟಿ.ಪಿ. ಕೌಂಟರುಗಳ ಸೌಲಭ್ಯವನ್ನು ನಿಲ್ಲಿಸಲಾಗಿದೆ. ಇದು ಗ್ರಾಹಕರಿಗೆ ತೊಂದರೆ ನೀಡುವ ಉದ್ದೇಶದಿಂದ ಕೈಗೊಂಡ ನಿರ್ಧಾರವಲ್ಲ. ಬದಲಾಗಿ, ಇನ್ನೂ ಹೆಚ್ಚಿನ ಗ್ರಾಹಕಸ್ನೇಹಿ ಸೌಲಭ್ಯ ಹಾಗೂ ಸೇವೆಯನ್ನು ನೀಡುವ ಉದ್ದೇಶವಾಗಿದೆ.

ಗ್ರಾಹಕರು ಬಿಲ್ ಪಾವತಿ ಮಾಡುವುದಕ್ಕೋಸ್ಕರ ಕಚೇರಿಗೆ ಬಂದು ಸರದಿಯಲ್ಲಿ ನಿಂತು ಪಾವತಿಸುವುದರ ಬದಲಾಗಿ ಅವರ ಮನೆ, ಕಚೇರಿ ಅಥವಾ ಅವರಿಗೆ ಅನುಕೂಲವಾದ ಸ್ಥಳದಲ್ಲಿದ್ದುಕೊಂಡೇ ಆನ್‌ಲೈನ್ ಬಿಲ್ ಪಾವತಿ ಮಾಡುವಂತಾಗಬೇಕೆಂಬುದೇ ನಮ್ಮ ಆಶಯ.

ಗ್ರಾಹಕರ ಸಮಯ ಅಮೂಲ್ಯವಾದುದೆಂದು ಬೆಸ್ಕಾಂ ಪರಿಗಣಿಸಿದೆ. ಅದಕ್ಕಾಗಿ ಗ್ರಾಹಕರಿಗೆ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ವ್ಯವಸ್ಥೆ (ಇ.ಸಿ.ಎಸ್), ಆನ್‌ಲೈನ್ ಅಥವಾ ಮೊಬೈಲ್ ಪಾವತಿ ಸೇವೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ವಿನಂತಿಸಲಾಗಿದೆ.

ಅಂಚೆ ಕಚೇರಿಗಳ ಮೂಲಕವೂ ಬಿಲ್ ಪಾವತಿಸುವ ಇನ್ನೊಂದು ವೇದಿಕೆಯನ್ನು ಗ್ರಾಹಕರಿಗೆ ಫೆಬ್ರವರಿ ತಿಂಗಳ ಕೊನೆಯಿಂದ ಒದಗಿಸಲಾಗಿದೆ. ಹೀಗಾಗಿ ಗ್ರಾಹಕರು ಇನ್ನುಮುಂದೆ ತಮ್ಮ ಸಮೀಪದ ಅಂಚೆ ಕಚೇರಿಯಲ್ಲಿಯೂ ಬಿಲ್ ಪಾವತಿ ಮಾಡಬಹುದಾಗಿದೆ.

ಈ ನಿಟ್ಟಿನಲ್ಲಿ ಗ್ರಾಹಕರ ಸಹಕಾರವನ್ನು ಕೋರಲಾಗಿದೆ ಹಾಗೂ ನಿಗಮದ ಉದ್ಯೋಗಿಗಳಾದ ತಾವೆಲ್ಲರೂ ಗ್ರಾಹಕರಿಗೆ ಈ ಬಗ್ಗೆ ಮಾಹಿತಿ ನೀಡಬೇಕೆಂದೂ ವಿನಂತಿಸಲಾಗಿದೆ.

ಮನ್ಮಥನಾಮ ಸಂವತ್ಸರಕ್ಕೆ ಕಾಲಿಟ್ಟಿರುವ ತಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

# ಸಂಪಾದಕೀಯ...



ಆತ್ಮೀಯರೆ,

ಯುಗಾದಿ ಹಬ್ಬದ ಬೇವು-ಬೆಲ್ಲವನ್ನು ಸವಿದು ಮನ್ಮಥನಾಮ ಸಂವತ್ಸರಕ್ಕೆ ಕಾಲಿಟ್ಟಿರುವ ತಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

ನಾವು ಈಗಾಗಲೇ ಬೇಸಿಗೆ ಕಾಲಕ್ಕೆ ಕಾಲಿಟ್ಟಿದ್ದೇವೆ. ಏಪ್ರಿಲ್‌ನಿಂದ ಜೂನ್‌ವರೆಗೆ ಪ್ರಖರವಾದ ಬಿಸಿಲು ಹಾಗೂ ಈ ಬೇಸಿಗೆಯಲ್ಲಿ ಆಗಾಗ್ಗೆ ಗುಡುಗು-ಸಿಡಿಲು ಸಹಿತ ಸುರಿಯುವ ಮಳೆಯನ್ನು ಸ್ವಾಗತಿಸಲು ಸಜ್ಜಾಗಿದ್ದೇವೆ.

ತಮ್ಮೆಲ್ಲರಿಗೂ ತಿಳಿದಿರುವಂತೆ, ಬೇಸಿಗೆ ಕಾಲ ಎಂದರೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಂದು ಸವಾಲಿನ ಸಮಯ. ಮನೆಯಲ್ಲಿ ಮತ್ತು ಕಚೇರಿಗಳಲ್ಲಿ ಫ್ಯಾನ್ ತಿರುಗದಿದ್ದರೆ, ಸಮರ್ಪಕ ನೀರು ಸರಬರಾಜು ಇಲ್ಲದಿದ್ದರೆ ಕಾರ್ಯಚಟುವಟಿಕೆಗಳೇ ಸ್ಥಗಿತಗೊಂಡಂತೆ. ಈ ಬಿಸಿಲುಗಾಲದಲ್ಲಿ ಅತ್ಯವಶ್ಯವಾಗಿರುವುದು ವಿದ್ಯುತ್ ಸರಬರಾಜು. ಆಧುನಿಕ ಜೀವನ ಶೈಲಿಯಲ್ಲಿ ವಿದ್ಯುತ್ ಇಲ್ಲದೆ, ಜೀವನವೇ ಅಸಾಧ್ಯ ಎನ್ನುವ ಸ್ಥಿತಿಗೆ ನಾವು ತಲುಪಿದ್ದೇವೆ.

ಮುಖ್ಯವಾಗಿ, ಏಪ್ರಿಲ್ ಹಾಗೂ ಮೇ ತಿಂಗಳುಗಳು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯ. ಹೀಗಾಗಿ, ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದರೆ, ಎಲ್ಲೆಡೆ ಅಸಮಾಧಾನ ವ್ಯಕ್ತವಾಗುವುದು ಸಹಜ.

ಬೇಸಿಗೆಯಲ್ಲಿ ಸಾಮಾನ್ಯವಾಗಿ ಜಲವಿದ್ಯುತ್ ಯೋಜನೆಗಳಲ್ಲಿ ನೀರಿನ ಕೊರತೆ ಉಂಟಾದರೆ, ವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳುತ್ತದೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗುವುದು ಅನಿವಾರ್ಯ ಹಾಗೂ ಗ್ರಾಹಕರ ತಾಳ್ಮೆಯನ್ನು ಪರೀಕ್ಷಿಸದೆ ಕರ್ತವ್ಯ ನಿರ್ವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಏಪ್ರಿಲ್ 1ರಿಂದ ಹೊಸ ಆರ್ಥಿಕ ವರ್ಷ ಕೂಡ ಆರಂಭವಾಗಿರುವುದರಿಂದ, ಸರ್ಕಾರದ ಬಜೆಟ್‌ನಲ್ಲಿ ಪ್ರಕಟಿಸಿರುವ ಇಂಧನ ಇಲಾಖೆಗೆ ಸಂಬಂಧಿಸಿದ ಯೋಜನೆಗಳನ್ನು ಜಾರಿಗೊಳಿಸುವ ಜವಾಬ್ದಾರಿ ಸಹ ನಮ್ಮ ಮೇಲಿದೆ.

ನಮ್ಮ ಸಹೋದ್ಯೋಗಿಗಳಲ್ಲಿ ನನ್ನ ಇನ್ನೊಂದು ಮನವಿ ಏನೆಂದರೆ, ನಿಮ್ಮ ಗೃಹಪತ್ರಿಕೆ "ಬೆಸ್ಕಾಂ ಸ್ನೇಹಿ" ಆರಂಭವಾಗಿ ಈಗಾಗಲೇ ಒಂದೂವರೆ ವರ್ಷ ಕಳೆಯುತ್ತಿದೆ. ಆದರೆ, ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆ ನಮಗೆ ಅವರ ಭಾವಚಿತ್ರ ಹಾಗೂ ಮಾಹಿತಿಗಳನ್ನು ಒದಗಿಸುತ್ತಿಲ್ಲ.

ಈ ಬಾರಿ ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಯಾವುದೇ ಪರೀಕ್ಷೆ ಇರಲಿ, ಅದರಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳ ವಿವರವನ್ನು ಅವರ ಭಾವಚಿತ್ರ ಸಹಿತ ಕಳುಹಿಸಬೇಕೆಂದು ವಿನಂತಿ. ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಮುಂದುವರಿಸುವ ಉದ್ದೇಶ ನಮ್ಮದು. "ಬೆಸ್ಕಾಂ ಸ್ನೇಹಿ" ನಿಮ್ಮದೇ ಗೃಹಪತ್ರಿಕೆ. ಅದನ್ನು ಪ್ರೋತ್ಸಾಹಿಸಿ ಬೆಳೆಸುವ ಜವಾಬ್ದಾರಿ ನಿಮ್ಮದು. ನಿಮ್ಮ ಸಲಹೆ-ಸೂಚನೆಗಳಿಗೆ ಸದಾ ಸ್ವಾಗತ.


ವಂದನೆಯೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ)

# Dream (magic) Meter

All of us know that meter is bread and butter of utilities. It is like a cash box. Like many product the Energy Meter has also gone under several changes due to Technological innovation happening in the field. The primary object of the Meter is to record the Energy consumed by a consumer in terms of units/KWh. But over a period of time, thanks to the innovation taking place in the metering field, the expectation of the stake-holders have increased multifold.

- It should display all the parameters apart from billing parameters
- It should store historical data for a period of 6 months
- It should store load survey for 45 days
- It must have communication like LPR/ RF/ PLCC or must be compatible to GSM/ GPRS modems
- It should follow one open common protocol like DLMS/ COSEM so as to ensure inter-operability issues
- It must have additional ports like optical Rs232, Rs485




**Evaluation of METERS**

**i Generation:** The first generation is legacy analogic meters which are Electromechanical meter (of disc type & counter type)

**ii Generation:** Electronic or Electrostatic meters which are digital type and considered to be more accurate displays all the parameters including billing parameters, tampers etc.

**iii Generation:** - Smart meters are Electrostatic meters with additional features like communication module (RF/ PLC) and relays for disconnection and reconnection of circuit.

**vi Generation (Magic meter) (Black box)**: The first 3 Generation meters are more or less known and familiar to all the stake holders connected with Power industry. The expectation from the meters has increased to such an extent that the primary object of meter (recording the energy) is defeated, as we are expecting it to do magic i.e. multi functions, such as recording of tampers, multiple data, communication capabilities, relays (for disconnection / reconnection), AMR real time on demands, load survey, etc.

The Meter readers who are entrusted to take readings are also confused with multiple parameters displayed in the meter for billing the consumer as per billing parameters.

As a Power Engineer, I have a dream to come out of this complex parameters and evolve a simple solution for ensuring 100% fool-proof billing without giving scope for tampering and human intervention.

Early in the morning when I went for a stroll, I was Thinking of a meter without display, without glass, no body casing, no terminal covers, no sealing wire, no plastic seals, no tampers display, no pilfer boxes, no tamper boxes, no lab seals, no calibration but still manage to read remotely and issue 100% bills without human intervention. For a while this looked like a dream as it was not practicable but my logical mind never wanted to give up and wanted to think on my dream meter project and make it a reality.

But somewhere a solution strike me as to how about developing Smart units (similar to RTU's) (Black Box) and install them on poles (replace the existing channel cutouts on the pole) and connect individual consumer mains. As Electrical Engineers, we know that Energy flowing in a circuit is proportional to the Current, Voltage and Time. The Smart units (or black boxes) can have inbuilt RF modules for communication with relays on need basis.

As all these smart units (with RF gadgets) are mounted on the poles, Mesh formation and Data transmission will be much easier (in view of clear sight) and in turn will hasten the data communication with DCU and HES either on RF or GSM/GPRS.

The HES can compute and analyze all the data using these parameters and billing engine can process the bills of all consumers as per billing parameters on any one day i.e. on 1st of every month thereby ensuring faster cash flow to the utilities. The Energy Audit issues can also be sorted out (as all the data are received on the same day). However, the customer can retain the existing meters for assessing their individual consumption.

# 2015-16ರ ಸಾಲಿನ ರಾಜ್ಯ ಆಯವ್ಯಯ - ಇಂಧನ ಇಲಾಖೆಗೆ ಅನುದಾನ

- ಬಿ.ಟಿ.ಪಿ.ಎಸ್–III ಮತ್ತು ಯರಮರಸ್ ಉಷ್ಣ ವಿದ್ಯುತ್ ಕೇಂದ್ರಗಳ ಸ್ಥಾಪನೆ, ಗಂಗಾಕಲ್ಯಾಣ ಯೋಜನೆ, ಹಿಂದುಳಿದ ತಾಲ್ಲೂಕುಗಳಲ್ಲಿ ವಿತರಣಾ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಮತ್ತು 371(ಜೆ) ತಿದ್ದುಪಡಿ ಅನುಸಾರವಾಗಿ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಒಟ್ಟಾರೆ 750 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

- ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಹಾಗು ಭಾಗ್ಯಜ್ಯೋತಿ/ ಕುಟೀರಜ್ಯೋತಿ ಸ್ಥಾಪನಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡುವುದಕ್ಕೆ 6,200 ಕೋಟಿ ರೂ.ಗಳನ್ನು ಒದಗಿಸಿದೆ.

- 2014ರ ಡಿಸೆಂಬರ್ ಅಂತ್ಯಕ್ಕೆ ರಾಜ್ಯ ಗ್ರಿಡ್‌ಗೆ 576.35 ಮೆಗಾವಾಟ್ ಉತ್ಪಾದನಾ ಸಾಮರ್ಥ್ಯವನ್ನು ಸೇರಿಸಲಾಗಿರುತ್ತದೆ. 2015ರ ಮಾರ್ಚ್ ಅಂತ್ಯಕ್ಕೆ ಹೆಚ್ಚುವರಿಯಾಗಿ 507.20ಮೆಗಾವಾಟ್ ಸಾಮರ್ಥ್ಯವನ್ನು ಸೇರಿಸಲು ನಿರೀಕ್ಷಿಸಿದೆ. ಇದರಲ್ಲಿ ನವೀಕರಿಸಬಹುದಾದ ಮೂಲಗಳಿಂದ (ಎನ್.ಸಿ.ಇ) 473.15 ಮೆಗಾವಾಟ್ ಹೆಚ್ಚುವರಿ ಸಾಮರ್ಥ್ಯವೂ ಸೇರಿದೆ.

- 2015–16ನೇ ಸಾಲಿನಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು:

- ಬಿ.ಟಿ.ಪಿ.ಎಸ್–III ಮತ್ತು ಯರಮರಸ್ ಘಟಕಗಳು-1 ಮತ್ತು 2ರಿಂದ ಒಟ್ಟಾರೆಯಾಗಿ 2,325 ಮೆಗಾವಾಟ್‌ನಷ್ಟು, ಕೇಂದ್ರ ವಿದ್ಯುತ್ ಘಟಕಗಳಿಂದ ಸುಮಾರು 221 ಮೆಗಾವಾಟ್‌ಗಳಷ್ಟು, ನವೀಕರಿಸಬಹುದಾದ ಇಂಧನ ಮೂಲಗಳಿಂದ 815 ಮೆಗಾವಾಟ್‌ಗಳಷ್ಟು ಹಾಗೂ ಜಲ ವಿದ್ಯುತ್ ಘಟಕಗಳ ನವೀಕರಣ ಸೇರಿದಂತೆ ಒಟ್ಟಾರೆಯಾಗಿ ಸುಮಾರು 3,361 ಮೆಗಾವಾಟ್‌ಗಳಷ್ಟು ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

- ಯಲಹಂಕದಲ್ಲಿ 350 ಮೆಗಾವಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆಗೆ ಕ್ರಮ.

- 1000 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಪಾರ್ಕ್‌ನ್ನು ಕೇಂದ್ರ ಸರ್ಕಾರದ ಜಂಟಿ ಸಹಯೋಗದೊಂದಿಗೆ 5,000 ಎಕರೆ ಪ್ರದೇಶದಲ್ಲಿ ಸ್ಥಾಪಿಸಿ ಉತ್ಪಾದನಾ ಘಟಕಗಳ ಅಭಿವೃದ್ಧಿಗೆ ಕ್ರಮ.

- ವಿದ್ಯುತ್ ಪ್ರಸರಣ ಬಲವರ್ಧನೆಗಾಗಿ 75 ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು.

- ಸಕ್ರಮಗೊಳಿಸಿದ 50,000 ನೀರಾವರಿ ಪಂಪುಸೆಟ್ಟುಗಳಿಗೆ ಮೂಲಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

- ನಗರ ಪಾಲಿಕೆಗಳು ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಸಂಯೋಜಿತ ಪ್ರಯತ್ನದೊಂದಿಗೆ ಪ್ರಸ್ತಾವಿತ "ನಗರ ಜ್ಯೋತಿ" ಯೋಜನೆಯಡಿ ಎಲ್ಲಾ ನಗರ ಪಾಲಿಕೆಗಳಲ್ಲಿ ಹಾಲಿ ಇರುವ MV/SV ಲ್ಯಾಂಪುಗಳನ್ನು LED ಲ್ಯಾಂಪುಗಳಿಂದ ಬದಲಿಸಲಾಗುವುದು.

- ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆಧುನಿಕ ಸ್ವಯಂ ಚಾಲಿತ ವಿದ್ಯುತ್ ಮಾಪಕ ಪರೀಕ್ಷಾ ಪ್ರಯೋಗಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

- ಹುಬ್ಬಳ್ಳಿ, ಕಲಬುರಗಿ, ಮಂಗಳೂರು ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಸಂಬಂಧಿತ ದೂರುಗಳನ್ನು ಪರಿಹರಿಸಲು ಗಣಕೀಕೃತ ಕೇಂದ್ರೀಯ ದೂರು ವಿಭಾಗವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

- ಕೃಷಿ ಪಂಪುಸೆಟ್ಟುಗಳಿಗೆ ಹಾಗೂ ಕುಟೀರಜ್ಯೋತಿ ಸಂಪರ್ಕಗಳಿಗೆ ಉಚಿತ ವಿದ್ಯುತ್ ಸರಬರಾಜು ಒದಗಿಸಲು 2015–16ನೇ ಸಾಲಿನಲ್ಲಿ 7,498 ಕೋಟಿ ರೂ.ಗಳನ್ನು ಸಹಾಯಧನವಾಗಿ ಕಾಯ್ದಿರಿಸಲಾಗಿದೆ.

- 2015–16ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆ 12,878 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

## Dream (magic) Meter

*ಹಿಂದಿನ ಪುಟದಿಂದ....*

This will drastically reduce number of installations in view of encouragement of bulk supply as single bill will be served to one premise i.e. to the parent R.R. Nos. The meter complaints such as MNR and other complaints such as transfer of RR No. will reduce. This will also reduce work load on MT staff. The cost of procurement of conventional meters will get reduced and also the reading cost.

This I call it innovation in the Metering field to come in the near future.

A dream can be made reality wherein you can eliminate traditional meters, seals, sealing wire, pilfer proof meter, Meter housing box, T.P boxes etc.

This innovation will give no room for tampers, pilferage, theft etc. and avoid human intervention and ensure 100% billing and move forward in reduction of AT & C and improve fiscal deficit of utilities.

**satishkumar. s. a.**
General Manager (DSM)

# ಅಂಡಮಾನ್ ದ್ವೀಪ ಪ್ರವಾಸ ಒಂದು ಸವಿ ನೆನಪು

ಭಾರತದ ಪೂರ್ವ ದಿಕ್ಕಿಗೆ ವಿಶಾಲವಾಗಿ ಹರಡಿಕೊಂಡಿರುವ ಬಂಗಾಳಕೊಲ್ಲಿ ಸಮುದ್ರದ ಮಧ್ಯೆ ತಲೆ ಎತ್ತಿರುವ 252 ದ್ವೀಪ ಸಮೂಹವೇ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ. ಅಂಡುಮಾನ್' ಎಂದರೆ ಜಾನಪದ ಭಾಷೆಯಲ್ಲಿ 'ಆಂಜನೇಯ' ಎಂದರ್ಥ. ಇದರಿಂದ ಅಂಡಮಾನ್ ಎನ್ನುವ ಹೆಸರು ಬಂದಿದೆಯಂತೆ. ಇಲ್ಲಿ ಸೀತೆಯನ್ನು ಹುಡುಕುವ ಕಾರಣ ಹನುಮಂತ ಮತ್ತು ಇತರೆ ವಾನರ ಸೈನ್ಯ ಬಂದಿತ್ತೆಂದು, ರಾಮಲಕ್ಷ್ಮಣರು ಇಲ್ಲಿ ಓಡಾಡಿದ್ದರೆಂದು ಜನ ನಂಬುತ್ತಾರೆ. ಅತ್ಯಂತ ಸುಂದರವಾದ ಸಮುದ್ರತೀರ, ಸ್ಪಟಿಕದಂತೆ ಕಂಗೊಳಿಸುವ ನೀರು, ಹಸಿರು ಹಸಿರಾದ ವನಸಿರಿ, ಪುರಾತನ ಕಾಲದ ಶಿಲಾಯುಗದ ಜನರ ವಾಸ, ಆದಿವಾಸಿಗಳ ನೈಜಬದುಕು, ಜಲಚರ ಪ್ರಾಣಿಗಳು ಹಾಗೂ ಸಸ್ಯರಾಶಿಯ ಸಮೃದ್ಧತೆ. ಹೀಗೆ ಇದರ ಸಿರಿಸಂಪತ್ತು ನಮ್ಮ ಮಾತುಗಳಿಗೆ, ಭಾವನೆಗಳ ತರ್ಜುಮೆಗೆ ಸಿಲುಕಲಾರದಂಥವು. ಜೀವಮಾನದಲ್ಲಿ ಒಮ್ಮೆ ನೋಡಲೇ ಬೇಕಾದ ಅಂಡಮಾನ್ ದ್ವೀಪದಲ್ಲಿ, ಕುಟುಂಬದ ಜೊತೆ ಕಳೆದ ಪ್ರವಾಸದ ಒಂದು ನೋಟ ಇಲ್ಲಿದೆ.

**ಪೋರ್ಟ್‌ಬ್ಲೇರ್‌ನ ಸೆಲ್ಯುಲಾರ್ ಬಂದೀಖಾನೆ–ಕಾಲಾಪಾನಿ:** 1935ರಲ್ಲಿ ಬ್ರಿಟಿಷರು ಭಾರತದ ಸುಮಾರು 250 ಕೈದಿಗಳಿಂದ ಬರ್ಮಾದಿಂದ



ಇಟ್ಟಿಗೆಗಳನ್ನು ತರಿಸಿ ಕಟ್ಟಿಸಿದ 648, ಕೈದಿಗಳನ್ನು ಬಂಧಿಸುವುದಕ್ಕೆ ಮಾಡಿದ ಜೈಲು. ಇದು ಒಂದು ಸೈಕಲ್ ಚಕ್ರದ ಮಾದರಿಯಲ್ಲಿದೆ. ಭಾರತದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರನ್ನು ಕಠಿಣ ಶಿಕ್ಷೆಗೆ

ಒಳಪಡಿಸುವುದಕ್ಕಾಗಿಯೇ ನಿರ್ಮಿತವಾದದ್ದು ಈ ಜೈಲು. ಕಾಲಾಪಾನಿ 'ಕಾಲ್' ಎಂಬ ಸಂಸ್ಕೃತದ ಶಬ್ದಕ್ಕೆ ಕೊನೆಯಾಗುವುದು, ಮರಣಹೊಂದುವುದು ಎಂದರ್ಥ. ಹಲವಾರು ರಾತ್ರಿಗಳು ಇಲ್ಲಿ ಸೆರೆಯಾಗಿ, ಕಠಿಣ ಶಿಕ್ಷೆ ಅನುಭವಿದ ಕೆಲವರನ್ನು ನೇಣುಹಾಕಲಾಗಿದೆ. ಎಲ್ಲಾ ಕ್ರಾಂತಿಕಾರಿಗಳಲ್ಲಿ ತುಂಬ ಹೆಸರುವಾಸಿಯಾದವರು ಎಂದರೆ "ವೀರ ಸಾವರ್ಕರ್". ಇವರ ಹೆಸರನ್ನು ಪೋರ್ಟ್‌ಬ್ಲೇರ್‌ನ ವಿಮಾನ ನಿಲ್ದಾಣಕ್ಕೆ ಇಡಲಾಗಿದೆ.

ಸೆಲ್ಯುಲಾರ್ ಜೈಲನ್ನು ನೋಡಿ ಅದರ ಕಥೆಯನ್ನು ಕೇಳಿ ಕಣ್ಣೀರು ಸುರಿಸದ ಭಾರತೀಯನೇ ಏಕೆ ಮಾನವನೇ ಇಲ್ಲ. ಭಾರತದಲ್ಲಿ ಭಾರತೀಯರನ್ನು ಆಂಗ್ಲರು ಹಿಂಸಿಸಿರುವ ಘಟನೆಗೆ ಸಾಕ್ಷಿಯಾದ ಇದು ಪ್ರತಿಯೊಬ್ಬರ ಮನ ಕಲಕುವ ಸತ್ಯ. ಹಗಲೆಲ್ಲಾ ಗಾಣದೊಡನೆ ಶ್ರಮ, ಇರುಳು ವಿಶ್ರಾಂತಿ ಪಡೆಯದಂತೆ ಕೈಕಾಲುಗಳಿಗೆ ಕಬ್ಬಿಣದ ಕೋಳಗಳು, ತುಕ್ಕು ಹಿಡಿದ ಕಬ್ಬಿಣದ ಬೋಗುಣಿಯಲ್ಲಿ ಊಟ, ದಿನವಿಡೀ ಕುಡಿಯಲು ಮಿತಿಯಲ್ಲಿ ನೀರು, ದಿನದಲ್ಲಿ ಬೆಳಿಗ್ಗೆ ಮತ್ತು ರಾತ್ರಿ ಎರಡುಬಾರಿ ಮಾತ್ರ ಶೌಚಾಲಯಕ್ಕೆ ಅವಕಾಶ – ತುರ್ತು ಅವಶ್ಯಕತೆಗೆ ಮಣ್ಣಿನ ಭೋಗುಣಿ, ಇದು ಒಡೆದಲ್ಲಿ ಅಧಿಕ ಚಡಿ ಏಟಿನ ಸುರಿಮಳೆ, ಒಬ್ಬರಿಗೊಬ್ಬರು ಸಂಪರ್ಕಿಸದಂತೆ 12ಅಡಿಗಳ ಎತ್ತರವುಳ್ಳ 10"x12" ಅಡಿಗಳ ಸಣ್ಣ ಕೋಣೆಗೆ ಒಂದು ಅಡಿ ಉದ್ದಗಲದ ಸಣ್ಣ ಗವಾಕ್ಷಿ, ಮಾತ್ರ ಇವು ಈ ಜೈಲಿನಲ್ಲಿ ನಮ್ಮ ಸ್ವತಂತ್ರ್ಯ ಹೋರಾಟಗಾರರು ನಡೆಸಿದ ಮನ ಕಲುಕುವ ಜೀವನ.

**ರಾಸ್ ದ್ವೀಪ:** ನಾರ್ತ್ ಬೇ ಇಂದ ಸ್ವಲ್ಪ ದೂರ ಹಡಗಿನಲ್ಲಿ ಕ್ರಮಿಸಿದರೆ ಸಿಗುವ ದ್ವೀಪವೇ 'ರಾಸ್ ದ್ವೀಪ'. ಇದೊಂದು ಬ್ರಿಟಿಷರ ಐಷಾರಾಮಿ ಜೀವನದ ಅಹಂಕಾರ ದರ್ಪಣದಂತೆ ತೋರುತ್ತದೆ. ಬ್ರಿಟಿಷರು ಇಲ್ಲಿ ನೆಲೆಸಿದಾಗ ತಮ್ಮ ಅನುಕೂಲಕ್ಕಾಗಿ ಬೇಕಾದ ರೀತಿಯಲ್ಲಿ ಕಟ್ಟಿಕೊಂಡ ಸೌಲಭ್ಯಗಳು 'Cellular Jail'ನ ದಾರುಣ ಬದುಕಿಗೆ ವ್ಯಂಗ್ಯ ಮಾಡುವಂತಿವೆ. ಕಾಲಾಪಾನಿಯಲ್ಲಿ ಕೈದಿಗಳಿಗೆ ಕುಡಿಯುವ ನೀರಿಲ್ಲದೆ ಒದ್ದಾಡುವ ಸ್ಥಿತಿ, ಒಂದುವೇಳೆ ನೀರು ಸಿಕ್ಕರೆ ಅದು ತುಂಬಾ ದುರ್ನಾತ ಬರುವ ಹಾಗೂ ಅನಾರೋಗ್ಯಕರವಾದ ಮಲಿನ ನೀರು. ಇಲ್ಲಿ 'ರಾಸ್' ದ್ವೀಪದಲ್ಲಿ ಬ್ರಿಟಿಷರು ಅವರಿಗಾಗಿಯೇ ನಿರ್ಮಿಸಿಕೊಂಡ 'Distilled Water Plant' ಇದು ಅತ್ಯಂತ ದಾರುಣದ ಕಥೆ. ಊಟವಿಲ್ಲದ ಬದುಕು ಕೈದಿಗಳದಾದರೆ, ಇಲ್ಲಿ ತಿನಿಸು ತಯಾರಿಸುವುದಕ್ಕೆ ಒಂದು ಬೇಕರಿ ಇತ್ತಂತೆ. ಬ್ರಿಟಿಷರಿಗೆ ಈಜುಕೊಳ, ಸಮುದ್ರದಲ್ಲೇ ಶಾರ್ಕ್‌ಗಳು ಬರದಂತೆ ಬಲೆಗಳಿಂದ ಸುತ್ತುವರೆದು ರಕ್ಷಿಸಿದ ಈಜುಕೊಳ, ಅವರಿಗಾಗಿ ಕ್ರೀಡಾಜಾಗ, ರಾತ್ರಿ ಕುಡಿದು ಸ್ವೇಚ್ಛೆಯಾಗಿ ಕುಣಿದು ಕುಪ್ಪಳಿಸಲು ಒಂದು ರಾತ್ರಿ ಕ್ಲಬ್, ಬ್ರಿಟಿಷರ ರಾಕ್ಷಸತ್ವದ ಇನ್ನೊಂದು ಮುಖ ಈ 'ರಾಸ್ ದ್ವೀಪ'.

**ಹ್ಯಾವ್ಲಾಕ್ ದ್ವೀಪ:** ಪೋರ್ಟ್ ಬ್ಲೇರ್‌ನಿಂದ ಎರಡೂವರೆ ಗಂಟೆಗಳು ಹಡಗಿನಲ್ಲಿ ಪ್ರಯಾಣ ಮಾಡಿದರೆ ಸಿಕ್ಕುವುದೇ ಹ್ಯಾವ್ಲಾಕ್ ದ್ವೀಪ. ಹಡಗಿನಲ್ಲಿ ಹೋಗುವಾಗ ದಾರಿ ಉದ್ದಕ್ಕೂ ಕಾಣುವ ವಿಶಾಲವಾದ ಸಮುದ್ರ ಅತ್ಯಂತ ರಮಣೀಯವಾದದ್ದು. ಹ್ಯಾವ್ಲಾಕ್‌ನ ವಿಶೇಷವೇನೆಂದರೆ ಸ್ಕೂಬಾ ಡೈವಿಂಗ್. ಇಲ್ಲಿ ಆಮ್ಲಜನಕದ ಸಿಲಿಂಡರ್ ಹೊತ್ತು ಸಮುದ್ರದ ತಳದವರೆಗೂ ಅಂದರೆ ಮೇಲಿನಿಂದ ಸಮುದ್ರದ 25–30 ಅಡಿ ಕೆಳಗೆ ಧುಮುಕಿ ಈಜುತ್ತಾ ಹೋಗಬೇಕು ಮೂಗನ್ನು ಮಾಸ್ಕಿನಿಂದ ಮುಚ್ಚಿ ಬಾಯಿಯ ಮೂಲಕ ಉಸಿರಾಡುತ್ತಿರಬೇಕು. ಸಮುದ್ರದ ತಳದಿಂದ ಕಾಣಿಸುವ ಹವಳಗಳು ವಿವಿಧ ಬಣ್ಣದ ಮೀನುಗಳು ಹಾಗೂ ಇತರ ಜಲಚರಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. 'ಸ್ಕೂಬಾ ಡೈವಿಂಗ್' ಪ್ರತಿಯೊಬ್ಬರಿಗೂ ರೋಮಾಂಚನವಾದ ಅನುಭವವನ್ನು ಕೊಡುವಂತದ್ದು.

**ನೀಲ್ ದ್ವೀಪದ ನೆನಪು:** ಹ್ಯಾವ್‌ಲಾಕ್‌ನಿಂದ ಸುಮಾರು ಒಂದು ತಾಸಿನ ಪ್ರಯಾಣದ ನಂತರ ಸಿಕ್ಕುವ ಇನ್ನೊಂದು ರಮಣೀಯವಾದ ದ್ವೀಪವೇ ನೀಲ್ ದ್ವೀಪ. ಇಲ್ಲಿ ಸಮುದ್ರ ನಿಚ್ಚಳವಾಗಿ ನೀಲಿ ಬಣ್ಣದ್ದೇ ಆಗಿರುತ್ತದೆ. ಅತ್ಯಂತ ಪರಿಶುದ್ಧವಾದ, ನಿರ್ಮಲವಾಗಿ ಸ್ಪಟಿಕದಂತೆ ಕಾಣುವ ನೀಲಿ ಸಮುದ್ರವನ್ನು ಮೇಲಿನಿಂದ ನೋಡಿದರೆ ಅದರ ತಳ ಕಾಣುತ್ತದೆ. ಇಲ್ಲಿ ಸೂರ್ಯಾಸ್ತ ಹಾಗೂ ಸುರ್ಯೋದಯ ನೋಡುವ ಸೌಭಾಗ್ಯ, ಬೀಚ್‌ಗಳಲ್ಲಿ ಸ್ನಾನಮಾಡಿ ಆಟವಾಡುವುದು ಒಂದು ಮರೆಯಲಾರದ ಅನುಭವ.

**ಆದಿವಾಸಿಗಳ ವಾಸಸ್ಥಳ:** ಅನೇಕ ವರ್ಷಗಳ ಹಿಂದಿನಿಂದ ಇಲ್ಲಿ ನೆಲೆಸಿರುವ ಆದಿವಾಸಿಗಳು ಈ ದ್ವೀಪಕ್ಕೆ ಬೇರೆಯವರನ್ನು ಬರಲು ಬಿಡುತ್ತಿರಲಿಲ್ಲವಂತೆ. ಇವರು ಬಿಲ್ಲು ಬಾಣಗಳಿಂದ ಹೊರಗಡೆಯಿಂದ ಬರುವವರನ್ನು ಕೊಲ್ಲುತ್ತಿದ್ದರಂತೆ. ಕಾಡಿನಲ್ಲಿ ಹಾಗೂ ಸಮುದ್ರದಲ್ಲಿನ

# ಸೌರಶಕ್ತಿ ಮೇಲ್ಛಾವಣಿ ಪಿ.ವಿ. ವಿದ್ಯುತ್ ಅನ್ನು ಉತ್ಪಾದಿಸುವ ವ್ಯವಸ್ಥೆಯ ಪ್ರಮುಖ ಅಂಶಗಳು

ದಿನಾಂಕ 22.05.2014 ರಂದು ಕರ್ನಾಟಕ ಸರ್ಕಾರವು 2014–21ರ ಸೌರಶಕ್ತಿ ರಾಜ್ಯನೀತಿಯನ್ನು ಪ್ರಕಟಿಸಿದ್ದು, ನೆಟ್ ಮೀಟರಿಂಗ್ ಆಧಾರದ ಮೇಲೆ ಸೌರಶಕ್ತಿ ಮೇಲ್ಛಾವಣಿ ಪಿ.ವಿ.ವ್ಯವಸ್ಥೆಯನ್ನು ಅಳವಡಿಸಿ ಬೆವಿಕಂ ಜಾಲ ಸಂಪರ್ಕಕ್ಕೆ ಹೆಚ್ಚುವರಿ ವಿದ್ಯುತ್ತನ್ನು ಪೂರೈಕೆ ಮಾಡಬಹುದಾಗಿದೆ. ಸೌರಶಕ್ತಿ ಮೇಲ್ಛಾವಣಿ ಪಿ.ವಿ.ವ್ಯವಸ್ಥೆಯನ್ನು ಅಳವಡಿಸುವ ಮೂಲಕ 2014–15 ರಿಂದ 2017–18 ರವರೆಗೆ ಪ್ರತಿ ವರ್ಷದಲ್ಲಿ 100 ಮೆ.ವ್ಯಾ. ಸೌರಶಕ್ತಿ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಿದ್ದು, ಒಟ್ಟು 400 ಮೆ.ವ್ಯಾ. ಮಹತ್ವಾಕಾಂಕ್ಷಿ ಯೋಜನೆಯನ್ನು ಹೊಂದಿದೆ.

ಇದುವರೆಗೂ ಬೆವಿಕಂ ನಲ್ಲಿ ಒಟ್ಟು 252 ಅರ್ಜಿಗಳು, 12 ಮೆ.ವ್ಯಾ.ಪಿ. ರಷ್ಟು ಸಾಮರ್ಥ್ಯಕ್ಕೆ ನೋಂದಣಿ ಶುಲ್ಕವನ್ನು ಬೆವಿಕಂಪನಿಯ ವ್ಯಾಪ್ತಿಯ ಕಾರ್ಯ ಮತ್ತು ಪಾಲನಾ ಉಪವಿಭಾಗಗಳಲ್ಲಿ ನೋಂದಾಯಿಸಲಾಗಿರುತ್ತದೆ. ದಿನಾಂಕ: 28.02.2015 ರವರೆಗೆ 11 ಸ್ಥಾವರಗಳಿಗೆ 225 ಕಿ.ವ್ಯಾ.ಪಿನ ಕಾರ್ಯ ಕ್ಷಮತೆಯಷ್ಟು ಸಂಪರ್ಕವನ್ನು ಕಲ್ಪಸಲಾಗಿರುತ್ತದೆ. ಈ ಸ್ಥಾವರಗಳ ವಿವರಗಳನ್ನು ಬೆವಿಕಂನ ಜಾಲತಾಣದಿಂದ ಪಡೆಯ ಬಹುದಾಗಿರುತ್ತದೆ.



ಬೆವಿಕಂನ 9 ಕಚೇರಿಗಳ ಮೇಲ್ಛಾವಣಿ ಮೇಲೆ 219 ಕಿ.ವ್ಯಾ.ಪಿ. ಅಳವಡಿಸಲು ಟೆಂಡರ್‌ಅನ್ನು ಆಹ್ವಾನಿಸಲಾಗಿದ್ದು ಹಾಗೂ ಇತರೆ ಬೆವಿಕಂ ಕಚೇರಿಗಳಲ್ಲೂ ಸಹ ಸೌರಶಕ್ತಿ ಮೇಲ್ಛಾವಣಿ ಪಿ.ವಿ.ವ್ಯವಸ್ಥೆಯನ್ನು ಅಳವಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆವಿಕಂಪನಿಯ ಸೌರಶಕ್ತಿ ಮೇಲ್ಛಾವಣಿಯ ಮೇಲೆ ಪಿವಿ ಘಟಕವನ್ನು ಅಳವಡಿಸಿ ವಿದ್ಯುತ್ ಅನ್ನು ಉತ್ಪಾದಿಸುವ ವ್ಯವಸ್ಥೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿಯೋಜಿಸಲು ಎಲ್ಲಾ ಇಂಜಿನಿಯರುಗಳಿಗೆ ಈ ಬಗ್ಗೆ ಇಂದು ಸೌರಶಕ್ತಿ ತಾಂತ್ರಿಕ ತರಬೇತಿಯ ಅಗತ್ಯತೆಯನ್ನು ಗಮನಿಸಿ ಬೆವಿಕಂನ ಡಿಎಸ್‌ಎಂ ಶಾಖೆಯಿಂದ ಸೌರಶಕ್ತಿ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಇದರಂತೆ ದಿನಾಂಕ 22.12.2014 ಮತ್ತು 23.12.2014 ರಲ್ಲಿ ಬೆಂಗಳೂರು ಆನಂದರಾವ್ ವೃತ್ತದ ಬಳಿ ಇರುವ ಕೆ.ಇ.ಬಿ. ಇಂಜಿನಿಯರುಗಳ ಸಂಘದ ಆಶ್ರಯದಲ್ಲಿ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸೌರಶಕ್ತಿ ತಾಂತ್ರಿಕ ತರಬೇತಿಯ ಕಾರ್ಯಕ್ರಮದಲ್ಲಿ ಬೆವಿಕಂನಿಂದ 30 ಇಂಜಿನಿಯರುಗಳನ್ನು, ಇತರ ಎಸ್ಕಾಂಗಳಾದ ಜೆಸ್ಕಾಂ, ಹೆಸ್ಕಾಂ, ಸೆಸ್ಕಾಂ ಮತ್ತು ಮೆಸ್ಕಾಂಗಳಿಂದ ಸುಮಾರು 40 ಇಂಜಿನಿಯರುಗಳು ಸೇರಿದಂತೆ 70 ಇಂಜಿನಿಯರುಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಂದಿನ ಅಧ್ಯಕ್ಷರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಯವರು, ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು ತಾಂತ್ರಿಕ ನಿರ್ದೇಶಕರಾದ ಶ್ರೀ ನಾಗೇಶ್ ರವರು ಮತ್ತು ಹಣಕಾಸಿನ ನಿರ್ದೇಶಕರಾದ ಶ್ರೀ ಗುರುಪ್ರಸಾದ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿರವರು 'ಎಲ್ಲಾ ಇಂಜಿನಿಯರ್‌ಗಳಿಗೆ ಕಾರ್ಯಕ್ರಮ ಯಶಸ್ವಿಯಾಗಲು ಮಾರ್ಗದರ್ಶನ ನೀಡಿ, ಈ ಕಾರ್ಯಕ್ರಮವನ್ನು ನಿಯೋಜಿಸಿದ ಬೆವಿಕಂ ಅಧಿಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದರು. ಹಾಗೆಯೇ ಮುಂದುವರೆಯುತ್ತಾ, ಬೆವಿಕಂ ಗ್ರಾಹಕರು ಎಂಎನ್‌ಆರ್‌ಇ ಯಿಂದ ಸಹಾಯಧನ ಪಡೆಯುವ ಕಾರ್ಯವನ್ನು ಬೆವಿಕಂನಿಂದಲೆ ನಿರ್ವಹಿಸಬೇಕೆಂದು ತಿಳಿಸಿದರು.

ತರಬೇತಿ ಮೇಲೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಇಂಜಿನಿಯರುಗಳಿಗೆ ಅನುಕೂಲವಾಗಲು "ಪವರ್ ಒನ್" ಸಂಸ್ಥೆಯಿಂದ ಇಂಜಿನಿಯರುಗಳ ಸಂಘದ ಕಟ್ಟಡದ 1 ಕಿ.ವ್ಯಾ.ಪಿ ಸಾಮರ್ಥ್ಯದ ನೆಟ್ ಮೀಟರಿಂಗ್ ಆಧಾರಿತ ಸೌರಶಕ್ತಿ ಆಧಾರಿತ ಪಿವಿ ವಿದ್ಯುತ್ ಅನ್ನು ಉತ್ಪಾದಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು.

ತರಬೇತಿ ಕಾರ್ಯಕ್ರಮದಲ್ಲಿ "ನ್ಯಾಶನಲ್ ಟ್ರೈನಿಂಗ್ ಸೆಂಟರ್ ಫಾರ್ ಸೋಲಾರ್ ಟೆಕ್ನಾಲಜಿ, ಕೆಪಿಟಿಸಿಎಲ್, ಬೆಂಗಳೂರು. ಈ ಸಂಸ್ಥೆಯ ನಿರ್ದೇಶಕರಾದ ಡಾ॥ ನಾಗನಗೌಡರು ಸೌರಶಕ್ತಿಯ ಸೌರಕೋಶಗಳ ಉತ್ಪಾದನೆಯಿಂದ ಪ್ರಾರಂಭಿಸಿ, ಸೌರಶಕ್ತಿಯ ಉಪಯೋಗಗಳನ್ನು ತಿಳಿಸುತ್ತಾ, "ಮೋನೋ/ಪಾಲಿ" ಕ್ರಿಸ್ಟಲೈನ್ ಕೋಶಗಳು ಮತ್ತು "ಥಿನ್ ಫಿಲಂಗಳ ರಚನೆ, ಇತರೆ ಕಾರ್ಯಕ್ಷಮತೆಯನ್ನೊಳಗೊಂಡ ಪವರ್ ಪಾಯಿಂಟ್ ಪ್ರೆಸಂಟೇಶನ್ ನೀಡಿದರು. ಹೀಗೆ ಸೌರಶಕ್ತಿ ವಿವಿಧ ಪರಿಣಿತರಿಂದ ಅನೇಕ ವಿಷಯಗಳ ಬೆಳಕನ್ನು ಚೆಲ್ಲಿ ಸೌರಶಕ್ತಿಯ ತರಬೇತಿ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತಲ್ಲದೆ ತರಬೇತಿ ಕಾರ್ಯಕ್ರಮಗಳು ಭಾಗವಹಿಸಿದ ಎಲ್ಲರ ಮನಗೆಲಲ್ಲು ಸಾಧ್ಯವಾಯಿತು.

**ಎಲ್. ಲಕ್ಷ್ಮೀಪತಿ**

ಉಪ ಪ್ರಧಾನ ವ್ಯವಸ್ಥಾಪಕರು (ವಿ), ಡಿಎಸ್‌ಎಂ, ಬೆ.ವಿ.ಕಂ.

---

*ಹಿಂದಿನ ಪುಟದಿಂದ....*

ಜೀವಿಗಳನ್ನು ಕೊಂದು ತಿಂದು ಬದುಕುತ್ತಿದ್ದರಂತೆ. ಈಗಲೂ ಸಹ ಇವರು ಬಟ್ಟೆ ಧರಿಸದೆ ಬೆತ್ತಲಾಗಿ ತಿರುಗುತ್ತಿರುತ್ತಾರೆ. ಇತ್ತೀಚೆಗೆ ಭಾರತ ಸರ್ಕಾರ ಅವರ ಅಳಿಯುವಿಕೆಯನ್ನು ತಪ್ಪಿಸಲು ನಿಗಾವಹಿಸಿ ಅವರ ರಕ್ಷಣೆ ಮಾಡುತ್ತಿದೆ. ಇವರು ಇರುವ ಕಾಡಿನ ಪ್ರದೇಶದಲ್ಲಿ ಬೇರೆ ಯಾರನ್ನೂ ಬಿಡುವುದಿಲ್ಲ. ಇವರನ್ನು ಸ್ವತಂತ್ರ್ಯವಾಗಿ ಬದುಕಲು ಅವಕಾಶ ಕಲ್ಪಿಸಿದೆ. ಇವರಲ್ಲಿ 'ಜಲವಾ'ಗಳೆಂದು ಕರೆಯುತ್ತಾರೆ.



**ನಾರ್ತ್‌ಬೇ ದ್ವೀಪ:** ಅಂಡಮಾನ್ ದ್ವೀಪ ಸಮೂಹದ ಉತ್ತರ ದಿಕ್ಕಿಗೆ ಇರುವ ದ್ವೀಪವೇ 'ನಾರ್ತ್ ಬೇ ದ್ವೀಪ'. ಇದರ ಮಧ್ಯದಲ್ಲಿ ಒಂದು ಸಮುದ್ರದ ನಾವಿಕರಿಗೆ ಗುರುತಿಗಾಗಿ ತೋರುವ ದೀಪ ಸ್ಥಂಬವಿದೆ. ಇದರ ಮೇಲೆ ಹತ್ತಿದರೆ ಸಮುದ್ರ ದೂರದವರೆಗೆ ಕಾಣುತ್ತದೆ. ಬ್ರಿಟಿಷರು ಮೊದಲು ಬಂದಾಗ ಈ ದ್ವೀಪಕ್ಕೆ ಮೊದಲು ಬಂದಿದ್ದರಂತೆ. ಈ ದ್ವೀಪಕ್ಕೆ ಸೇರಿಕೊಂಡ ಸಮುದ್ರದಲ್ಲಿ "Sea walk" ಹಾಗೂ "scooba diving"ನ ಸೌಲಭ್ಯವಿದೆ. ನೀರು ತುಂಬಾ ತಿಳಿಯಾಗಿರುವುದರಿಂದ "Sea walk" ಎಂದರೆ ನೀರಿನೊಳಗೆ ನಡೆಯುವ ವ್ಯವಸ್ಥೆ ಸುಲಭವಾಗುತ್ತದೆ.

ಒಟ್ಟಾರೆ, ದೇಶ ಭಕ್ತಿ, ಸೌಂದರ್ಯ, ಸೌಹಾರ್ದ, ಮನರಂಜನೆ, ರೋಮಾಂಚನ, ಹೀಗೆ ಹಲವು ಪ್ರಕಾರದ ಮಜಲುಗಳ ಮಹಾಪೂರವೇ ಈ ಅಂಡಮಾನ್ ದ್ವೀಪದ ಪ್ರವಾಸ.

**ರೇಖಾ ಹೆಚ್.ಆರ್.**

ಉಪ ಪ್ರಧಾನ ವ್ಯವಸ್ಥಾಪಕರು (ಮಾ.ಹ.ಅ.),
ನಿಗಮ ಕಛೇರಿ, ಬೆ.ವಿ.ಕಂ.

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

iii) ಕಲಮು 4.03 (ii) (ಎ–ಇಂದ ಇ–ವರೆಗೆ) ರಲ್ಲಿನ ಎಲ್ಲ ಷರತ್ತುಗಳನ್ನು ಅರ್ಜಿದಾರರು ಪಾಲಿಸಿದ ನಂತರ, ಕಾರ್ಯಾದೇಶವನ್ನು ನೀಡಿ, ಕವಿನಿ ಆಯೋಗ (ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಲೈಸೆನ್ಸುದಾರರ ಕರ್ತವ್ಯಗಳು) ನಿಬಂಧನೆಗಳು, 2004 {ಅನುಬಂಧ–1} ರ ಅಡಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಲೈಸೆನ್ಸುದಾರರು ಅರ್ಜಿದಾರರಿಗೆ ವಿದ್ಯುತ್ ಸರಬರಾಜಿನ ಏರ್ಪಾಡನ್ನು ಮಾಡತಕ್ಕದ್ದು.

iv) ಮೇಲೆ ಸೂಚಿಸಿರುವ ಕಲಮು 4.03(ii) (ಎ ಇಂದ ಇ ವರೆಗೆ) ರಲ್ಲಿನ ಷರತ್ತುಗಳನ್ನು ನಿಗದಿತ ಅವಧಿಯೊಳಗೆ ಪಾಲಿಸಲು ಅರ್ಜಿದಾರರು ವಿಫಲರಾದರೆ ಅಥವಾ ಅರ್ಜಿದಾರರೇ ವಿದ್ಯುತ್ ಸರಬರಾಜು ಪಡೆದುಕೊಳ್ಳಲು ಸಿದ್ಧರಿಲ್ಲದಿದ್ದರೆ, ಅರ್ಜಿಯನ್ನು ರದ್ದುಪಡಿಸಲಾಗಿದೆ ಎಂದು ಪರಿಗಣಿಸಿ, ನಿಗದಿಪಡಿಸಿರುವ ಅವಧಿಯೊಳಗೆ ಅರ್ಜಿದಾರರಿಗೆ ವಿದ್ಯುತ್ ಸರಬರಾಜಿನ ಏರ್ಪಾಡನ್ನು ಮಾಡದಿರುವುದಕ್ಕೆ ಲೈಸೆನ್ಸುದಾರರು ದಂಡವನ್ನು ಪಾವತಿಸುವ ಹೊಣೆಗಾರಿಕೆಯು ರದ್ದಾಗುತ್ತದೆ. ಅರ್ಜಿದಾರರು ಪಾವತಿಸಿರುವ ನೋಂದಾವಣಿ–ಕಾರ್ಯಪ್ರಕ್ರಿಯೆ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಕಲಮು 4.03ರ ಪ್ರಕಾರ ಅರ್ಜಿದಾರರಿಗೆ ವಿತರಿಸಿರುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಈ ಷರತ್ತನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಆದಾಗ್ಯೂ, ವಿದ್ಯುತ್ ಮಂಜೂರಾತಿ ಅವಧಿಯು ಮುಕ್ತಾಯಗೊಳ್ಳುವ ಮುನ್ನ ಆ ಅವಧಿಯನ್ನು ನವೀಕರಿಸುವಂತೆ ಅರ್ಜಿದಾರರು ಕೋರಿದರೆ, ಕಲಮು 30.01ರಲ್ಲಿ ನಿಗದಿಪಡಿಸಿರುವ ಪುನರ್ ನೋಂದಾವಣಿ ಶುಲ್ಕವನ್ನು ಪಾವತಿಸುವ ಷರತ್ತಿಗೆ ಒಳಪಟ್ಟು ಕೇವಲ ಒಂದು ಬಾರಿ ಪುನರ್ ನವೀಕರಿಸಬಹುದು. ಹಾಗೆ ನವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಲೈಸೆನ್ಸುದಾರರು ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಏರ್ಪಾಡನ್ನು ಮಾಡತಕ್ಕದ್ದು. ಆ ಅವಧಿಯಲ್ಲೂ ಸಹ ಅರ್ಜಿದಾರರು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಲು ವಿಫಲರಾದರೆ ಅರ್ಜಿಯು ರದ್ದುಗೊಂಡಿದೆ ಎಂದು ಪರಿಗಣಿಸತಕ್ಕದ್ದು.

iii) ಕಲಮು 4.03(ii) (ಎ ಇಂದ ಇ ವರೆಗೆ)ರಲ್ಲಿನ ಎಲ್ಲ ಷರತ್ತುಗಳನ್ನು ಅರ್ಜಿದಾರರು ಪಾಲಿಸಿದ ನಂತರ, ಕಾರ್ಯಾದೇಶವನ್ನು ನೀಡಿ, ಕವಿನಿಆಯೋಗ(ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಲೈಸೆನ್ಸುದಾರರ ಕರ್ತವ್ಯಗಳು) ನಿಬಂಧನೆಗಳು, 2004 {ಅನುಬಂಧ–1}ರ ಅಡಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಲೈಸೆನ್ಸುದಾರರು ಅರ್ಜಿದಾರರಿಗೆ ವಿದ್ಯುತ್ ಸರಬರಾಜಿನ ಏರ್ಪಾಡನ್ನು ಮಾಡತಕ್ಕದ್ದು.

iv) ಮೇಲೆ ಸೂಚಿಸಿರುವ ಕಲಮು 4.03(ii) (ಎ ಇಂದ ಇ ವರೆಗೆ)ರಲ್ಲಿನ ಷರತ್ತುಗಳನ್ನು ನಿಗದಿತ ಅವಧಿಯೊಳಗೆ ಪಾಲಿಸಲು ಅರ್ಜಿದಾರರು ವಿಫಲರಾದರೆ ಅಥವಾ ಅರ್ಜಿದಾರರೇ ವಿದ್ಯುತ್ ಸರಬರಾಜು ಪಡೆದುಕೊಳ್ಳಲು ಸಿದ್ಧರಿಲ್ಲದಿದ್ದರೆ, ಅರ್ಜಿಯನ್ನು ರದ್ದುಪಡಿಸಲಾಗಿದೆ ಎಂದು ಪರಿಗಣಿಸಿ, ನಿಗದಿಪಡಿಸಿರುವ ಅವಧಿಯೊಳಗೆ ಅರ್ಜಿದಾರರಿಗೆ ವಿದ್ಯುತ್ ಸರಬರಾಜಿನ ಏರ್ಪಾಡನ್ನು ಮಾಡದಿರುವುದಕ್ಕೆ ಲೈಸೆನ್ಸುದಾರರು ದಂಡವನ್ನು ಪಾವತಿಸುವ ಹೊಣೆಗಾರಿಕೆಯು ರದ್ದಾಗುತ್ತದೆ. ಅರ್ಜಿದಾರರು ಪಾವತಿಸಿರುವ ನೋಂದಾವಣಿ–ಕಾರ್ಯಪ್ರಕ್ರಿಯೆ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಕಲಮು 4.03ರ ಪ್ರಕಾರ ಅರ್ಜಿದಾರರಿಗೆ ವಿತರಿಸಿರುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಈ ಷರತ್ತನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಆದಾಗ್ಯೂ, ವಿದ್ಯುತ್ ಮಂಜೂರಾತಿ ಅವಧಿಯು ಮುಕ್ತಾಯಗೊಳ್ಳುವ ಮುನ್ನ ಆ ಅವಧಿಯನ್ನು ನವೀಕರಿಸುವಂತೆ ಅರ್ಜಿದಾರರು ಕೋರಿದರೆ, ಕಲಮು 30.01ರಲ್ಲಿ ನಿಗದಿಪಡಿಸಿರುವ ಪುನರ್ ನೋಂದಾವಣಿ ಶುಲ್ಕವನ್ನು ಪಾವತಿಸುವ ಷರತ್ತಿಗೆ ಒಳಪಟ್ಟು ಕೇವಲ ಒಂದು ಬಾರಿ ಪುನರ್ ನವೀಕರಿಸಬಹುದು. ಹಾಗೆ ನವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಲೈಸೆನ್ಸುದಾರರು ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಏರ್ಪಾಡನ್ನು ಮಾಡತಕ್ಕದ್ದು. ಆ ಅವಧಿಯಲ್ಲೂ ಸಹ ಅರ್ಜಿದಾರರು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಲು ವಿಫಲರಾದರೆ ಅರ್ಜಿಯು ರದ್ದುಗೊಂಡಿದೆ ಎಂದು ಪರಿಗಣಿಸತಕ್ಕದ್ದು.

**ದಿನಾಂಕ 22.07.2010ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಎಸ್: ಡಿ: 07: 10, ದಿನಾಂಕ 1.07.2010ರ ಪ್ರಕಾರ ತಿದ್ದುಪಡಿಗೊಂಡ ಆವೃತಿಯನ್ನು ಹಾಲಿ ಕಲಮಿಗೆ ಈ ಮುಂದೆ ಸೂಚಿಸಿರುವ ಟಿಪ್ಪಣಿಯನ್ನು ಸೇರಿಸಲಾಗಿದೆ.**


**ಟಿಪ್ಪಣಿ:** ಅರ್ಜಿದಾರರು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಲು ಇಚ್ಛಿಸದಿದ್ದಲ್ಲಿ ಹಾಗೂ ಒಪ್ಪಂದದ ಪತ್ರವನ್ನು ಸಲ್ಲಿಸಿರದಿದ್ದರೆ, ಅರ್ಜಿಯನ್ನು ಸಲ್ಲಿಸಿ ತಾನು ಪಾವತಿಸಿರುವ ಮೊಬಲಗನ್ನು ಹಿಂಪಾವತಿಸಬೇಕೆಂದು ಕೋರಬಹುದಾಗಿದೆ. ಹಾಗೆ ಅರ್ಜಿಯನ್ನು ಸಲ್ಲಿಸಿದ 60 (ಅರವತ್ತು) ದಿನಗಳ ಒಳಗೆ ಲೈಸೆನ್ಸುದಾರರು, ಒಟ್ಟು ಮೊಬಲಗಿನಲ್ಲಿ ಶೇಕಡಾ10ರಷ್ಟನ್ನು ಹಿಡಿದುಕೊಂಡು, ಬಾಕಿ ಮೊಬಲಗನ್ನು ಅರ್ಜಿದಾರರಿಗೆ ಹಿಂಪಾವತಿಸತಕ್ಕದ್ದು.

**4.04 ವಿದ್ಯುತ್ ಸಂಪರ್ಕ ಸೇವಾ ಮಾರ್ಗ**

- ಭೂಗತವಾಗಿರಲಿ/ಮೇಲ್ಮಾರ್ಗವಾಗಿರಲಿ, ಹತ್ತಿರದ ಕಂಬದಿಂದ ಸರಬರಾಜು ಪ್ರಾರಂಭಗೊಳ್ಳುವ ಬಿಂದುವಿನವರೆಗಿನ ವಿದ್ಯುತ್ ಮಾರ್ಗವನ್ನು ಅರ್ಜಿದಾರರೇ ಒಬ್ಬ ವಿದ್ಯುತ್ ಗುತ್ತಿಗೆದಾರರ ಮೂಲಕ ಮಾಡಿಸಿಕೊಳ್ಳತಕ್ಕದ್ದು.
- ಈ ವಿದ್ಯುತ್ ಮಾರ್ಗದ ಅಳತೆಯು 16 ಚ.ಮಿ.ಮೀ. ಅಥವಾ ಅಧಿಕವಾಗಿದ್ದರೆ, ಒಳಹರಿವಿನ ಮಾರ್ಗಕ್ಕೆ ಮೊಹರನ್ನು ಹಾಕಲು ಸೌಲಭ್ಯವಿರುವ ಬಸ್ ಬಾರ್ ಚೇಂಬರ್‌ಅನ್ನು ಅರ್ಜಿದಾರರು ಕಡ್ಡಾಯವಾಗಿ ಒದಗಿಸತಕ್ಕದ್ದು. 3 ಅಥವಾ ಕಡಿಮೆ ಸಂಪರ್ಕವಿರುವ ಸ್ಥಾಪನಗಳಿಗೆ ಇದು ಅನ್ವಯಿಸುವುದಿಲ್ಲ.
- ಲೈಸೆನ್ಸುದಾರರು, ಅರ್ಜಿದಾರರ ಆವರಣದ ಕೆಳಗೆ, ಮೂಲಕ ಅಥವಾ ಮೇಲ್ಭಾಗದಲ್ಲಿ ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಎಳೆಯುವುದಕ್ಕೆ ಅಥವಾ ಆ ಆವರಣದಲ್ಲಿ ಸಲಕರಣೆಗಳನ್ನು ಅಳವಡಿಸುವುದಕ್ಕೆ ಅನುಮತಿಯು ದೊರಕಿದೆ ಎಂದು ಭಾವಿತವಾಗುವುದು ಹಾಗೂ ಅಂತಹ ಅಧಿಕಾರ ಲೈಸೆನ್ಸುದಾರರದ್ದಾಗಿರುತ್ತದೆ.

**...ಮುಂದುವರಿಯುವುದು**

# ಜ್ಞಾನಪೀಠ ಪ್ರಶಸ್ತಿ



**ವಿ.ಕೃ. ಗೋಕಾಕ್ (1909–1992):** ತಮ್ಮ ಹಲವು ಸಾಧನೆ, ಸಿದ್ಧಿಗಳಿಂದ ಕನ್ನಡಕ್ಕೆ ಅಂತರರಾಷ್ಟ್ರೀಯ ಖ್ಯಾತಿಯನ್ನೂ, ಗೌರವವನ್ನೂ ತಂದು ಕೊಟ್ಟ ವಿನಾಯಕ ಕೃಷ್ಣರಾವ್ ಗೋಕಾಕರು (ವಿ.ಕೃ. ಗೋಕಾಕ್ ಎಂದೇ ಪ್ರಸಿದ್ಧಿ), 1909ರ ಅಗಸ್ಟ್ 9ರಂದು ಅವಿಭಜಿತ ಧಾರವಾಡ ಜಿಲ್ಲೆಯ ಸವಣೂರು ಎಂಬಲ್ಲಿ ಜನಿಸಿದರು.

ಕನ್ನಡಕ್ಕೆ ಐದನೆಯ ಜ್ಞಾನಪೀಠ ಪ್ರಶಸ್ತಿಯನ್ನು 1991ರಲ್ಲಿ ತಂದುಕೊಟ್ಟ ಗೋಕಾಕರು ಕನ್ನಡದ ಪ್ರತಿಭಾವಂತ ಕವಿ, ಪಂಡಿತ. ಈ ಶತಮಾನದ ಕನ್ನಡ ಲೇಖಕರಲ್ಲಿ ಅಗ್ರಗಣ್ಯರಾಗಿರುವ ಇವರ ಬರಹ ತುಂಬ ವಿಪುಲವೂ, ವ್ಯಾಪಕವೂ ಆದದ್ದು. ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಗೋಕಾಕರು ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡುವಾಗ ಪ್ರಶಸ್ತಿ ಆಯ್ಕೆ ಸಮಿತಿ ಅವರ ಯಾವುದೇ ಕೃತಿಯನ್ನು ಹೆಸರಿಸಲಿಲ್ಲ. 'ಕನ್ನಡ ಸಾಹಿತ್ಯ ಲೋಕಕ್ಕೆ ಅವರು 1969ರಿಂದ 1984ರ ಅವಧಿಯಲ್ಲಿ ನೀಡಿದ ಅನುಪಮ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ' ಎಂದು ಹೇಳಿದೆ. ಯಾವುದೇ ಕೃತಿಯನ್ನು ಹೆಸರಿಸದೇ ಜ್ಞಾನಪೀಠ ಪ್ರಶಸ್ತಿ ಕೊಟ್ಟದ್ದು ಇದೇ ಮೊದಲು. ಆದರೆ ಬಹಳ ಜನರು ಗೋಕಾಕರಿಗೆ ಅವರ ಮೇರು ಕೃತಿ 'ಭಾರತ ಸಿಂಧು ರಶ್ಮಿ'ಗಾಗಿಯೇ ಈ ಪ್ರಶಸ್ತಿ ಬಂದಿದೆ ಎಂದು ಭಾವಿಸಿದ್ದಾರೆ.

ಸಾಮಾನ್ಯವಾಗಿ ಜ್ಞಾನಪೀಠ ಪ್ರಶಸ್ತಿಯನ್ನು ದೆಹಲಿಯಲ್ಲಿ ನೀಡಲಾಗುತ್ತದೆ. ಆದರೆ ಗೋಕಾಕರಿಗೆ ಪ್ರಶಸ್ತಿಯನ್ನು ನೀಡಲು ಸ್ವತಃ ಈ ದೇಶದ ಪ್ರಧಾನ ಮಂತ್ರಿಗಳೇ ಮುಂಬಯಿಗೆ ಆಗಮಿಸಿದ್ದರು. ಇದು ಗೋಕಾಕರು ಎಷ್ಟು ಮಹತ್ವದ ವ್ಯಕ್ತಿ ಎಂಬುದಕ್ಕೆ ಒಂದು ನಿದರ್ಶನ.

1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು 1979ರಲ್ಲಿ ಕ್ಯಾಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಮತ್ತು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಪದವಿ ಇವೆರಡೂ ಕನ್ನಡಿಗರೊಬ್ಬರಿಗೆ ಮೊದಲ ಬಾರಿಗೆ ಸಂದ ಗೌರವಗಳಾಗಿವೆ.

ಅವರ ಮೇರು ಕೃತಿ 'ಭಾರತ ಸಿಂಧು ರಶ್ಮಿ'ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ವಿದ್ಯಾಭವನದ ರಾಜಾಜಿ ಪ್ರಶಸ್ತಿ ಮತ್ತು ಐ.ಬಿ.ಎಚ್. ಪ್ರಶಸ್ತಿಗಳೂ ದೊರಕಿವೆ. 'ದ್ಯಾವಾ ಪೃಥಿವೀ' ಕವನ ಸಂಕಲನಕ್ಕೆ 1960ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ.

ಕರ್ನಾಟಕ ಸರ್ಕಾರ 1980ರಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಭಾಷೆಗಳ ಸ್ಥಾನಮಾನ ಕುರಿತು ವರದಿ ನೀಡಲು ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ ನೀಡಿದ ವರದಿ ಕನ್ನಡದ ಪರವಾಗಿತ್ತು. ಸರ್ಕಾರ ಈ ವರದಿಯನ್ನು ಅಂಗೀಕರಿಸಲು ಹಿಂದೆ ಮುಂದೆ ನೋಡಿತು. ಕನ್ನಡ ಜನತೆ ಮೊದಲ ಬಾರಿಗೆ ಒಕ್ಕೊರಲಿನಿಂದ 'ಗೋಕಾಕ್ ವರದಿ ಜಾರಿಗೆ ಬರಲಿ' ಎಂದು ಸರ್ಕಾರವನ್ನು ಒತ್ತಾಯಿಸಿತು. ಈ ಸಂದರ್ಭದಲ್ಲಿ ನಡೆದ ಕನ್ನಡ ಚಳವಳಿ ಒಂದು ಐತಿಹಾಸಿಕ ದಾಖಲೆಯಾಗಿದೆ. ಕರ್ನಾಟಕದಲ್ಲಿ ಈ ಪ್ರಮಾಣದ ಚಳವಳಿ ಹಿಂದೆಂದೂ ನಡೆದಿರಲಿಲ್ಲ.

ತಮ್ಮ ಬದುಕಿನುದ್ದಕ್ಕೂ ಕನ್ನಡದ ಕೀರ್ತಿಪತಾಕೆಗಳನ್ನು ದೇಶದ ಒಳಗೂ ಹೊರಗೂ ಹಾರಿಸಿದ ಗೋಕಾಕರು 1992ರ ಏಪ್ರಿಲ್ 28ರಂದು ಮುಂಬೈನಲ್ಲಿ ನಿಧನರಾದರು.

# ರಾಷ್ಟ್ರೀಯ ದಿನಾಚರಣೆ

**ವಿಶ್ವ ಆರೋಗ್ಯ ದಿನ (ಏಪ್ರಿಲ್ 7):** ಪ್ರತಿವರ್ಷ ಏಪ್ರಿಲ್ 7 ರಂದು ವಿಶ್ವ ಆರೋಗ್ಯ ದಿನ ಆಚರಿಸಲಾಗುತ್ತದೆ. ಈ ದಿನ ವಿಶ್ವ ಆರೋಗ್ಯ ಸಂಸ್ಥೆಯು ಸ್ಥಾಪನೆಗೊಂಡದ್ದು. ಆರೋಗ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶ. 1948ರಲ್ಲಿ ನಡೆದ ಮೊದಲ ವಿಶ್ವ ಆರೋಗ್ಯ ಸಭೆಯಲ್ಲಿ ಏಪ್ರಿಲ್ 7ನ್ನು ವಿಶ್ವ ಆರೋಗ್ಯ ದಿನವಾಗಿ ಆಚರಿಸಲು ನಿರ್ಧರಿಸಲಾಯಿತು. 1950ರಿಂದ ವಿಶ್ವ ಆರೋಗ್ಯ ದಿನದ ಆಚರಣೆ ಜಾರಿಗೆ ಬಂತು. ಈ ದಿನ ಆರೋಗ್ಯದ ಬಗ್ಗೆ ಜನಜಾಗೃತಿ ಮೂಡಿಸಲು ವಿಶ್ವದಾದ್ಯಂತ ವಿವಿಧ ರೀತಿಯ ಕಾರ್ಯಕ್ರಮಗಳು ನಡೆಯುತ್ತವೆ.




**ವಿಶ್ವ ಭೂದಿನ (ಏಪ್ರಿಲ್ 22):** ಪ್ರತಿ ವರ್ಷ ಏಪ್ರಿಲ್ 22ರಂದು 175 ದೇಶಗಳ ನೂರು ಕೋಟಿಗೂ ಅಧಿಕ ಜನರು ವಿಶ್ವ ಭೂ ದಿನವನ್ನು ಆಚರಿಸುತ್ತಾರೆ. ಭೂಮಿದಿನ ಕಲ್ಪನೆಯನ್ನು ಹುಟ್ಟು ಹಾಕಿದವರು ಅಮೆರಿಕದ ಸೆನೆಟರ್ ಆಗಿದ್ದ ನೆಲ್ಸನ್ ಗೆಲಾರ್ಡ್. 1970ರಲ್ಲಿ ಮೊದಲ ಬಾರಿಗೆ ಭೂಮಿ ದಿನವನ್ನು ಆಚರಿಸಲಾಯಿತು. ಇದರಂತೆ ಜಾಗತಿಕ ತಾಪಮಾನ ವೈಪರೀತ್ಯವನ್ನು ತಡೆಗಟ್ಟಲು ದೇಶದೆಲ್ಲೆಡೆ ಹಸಿರು ಕ್ರಾಂತಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ದಿನ ಪರಿಸರ ಸಂರಕ್ಷಣೆ ಬಗ್ಗೆ ವಿವಿಧ ರೀತಿಯ ಕಾರ್ಯಕ್ರಮ ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತದೆ.



**ಕಾರ್ಮಿಕ ದಿನ (ಮೇ 1):** ಕಾರ್ಮಿಕ ಚಳವಳಿಯ ನೆನಪಿಗಾಗಿ ಮೇ 1 ಕಾರ್ಮಿಕರ ದಿನವಾಗಿ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಆಚರಿಸಲಾಗುತ್ತದೆ. 1860ರಿಂದ ದಿನವೊಂದಕ್ಕೆ 8 ಗಂಟೆಗಳ ಕೆಲಸವನ್ನು ನಿಗದಿಗೊಳಿಸಬೇಕೆಂಬ ಚಳವಳಿ ಆರಂಭವಾಯಿತು. ಅಮೆರಿಕ, ಕೆನಡಾ ದೇಶಗಳಲ್ಲಿ ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ದಿನವೊಂದಕ್ಕೆ 10,12,14 ಗಂಟೆಗಳ ಕಾಲ ಬಲವಂತವಾಗಿ ದುಡಿಸಿಕೊಳ್ಳುವುದನ್ನು



ಈ ಸಂಘಟನೆಗಳು ವಿರೋಧಿಸಿದವು. ಶಿಕಾಗೋ ಸಾವಿರಾರು ಕಾರ್ಮಿಕರ ಸಂಘಟನೆಗಳ ಕೇಂದ್ರವಾಯಿತು. 1881ರ ಮೇ 1 ರಂದು ಮೊದಲ ಬಾರಿಗೆ, ದಿನಕ್ಕೆ 8 ಗಂಟೆಗಳ ಕೆಲಸದ ಕಾನೂನನ್ನು ಜಾರಿಗೊಳಿಸಲಾಯಿತು. ಹೀಗಾಗಿ ಮೇ 1 ಕಾರ್ಮಿಕರ ದಿನವಾಗಿ ಘೋಷಿತವಾಯಿತು. ಭಾರತದಲ್ಲಿ 1923ರಿಂದ ಮೇ ದಿನವನ್ನು ಆಚರಿಸಲಾಗುತ್ತಿದೆ.

**ವಿಶ್ವ ತಂಬಾಕು ನಿಷೇಧ ದಿನ (ಮೇ 31):** ವಿಶ್ವ ತಂಬಾಕು ನಿಷೇಧ ದಿನವು ವಿಶ್ವ ಪರ್ಯಂತ ಪ್ರತಿ ವರ್ಷ ಮೇ 31ರಂದು ಆಚರಿಸಲಾಗುತ್ತದೆ. ವಿಶ್ವ ಆರೋಗ್ಯ ಸಂಘಟನೆಯ ಸದಸ್ಯ ರಾಷ್ಟ್ರಗಳು 1987ರ ಇಸವಿಯಲ್ಲಿ ತಂಬಾಕು ಸೇವನೆಯಿಂದ ಉಂಟಾಗುವ ರೋಗ ಮತ್ತು ಸಾವು ನೋವುಗಳನ್ನು ಸರ್ವರ ಗಮನಕ್ಕೆ ತರಲು ವಿಶ್ವ ತಂಬಾಕು ನಿಷೇಧ ದಿನವನ್ನು ಆಯೋಜಿಸಿದರು.

ಜರ್ಮನ್ ವಿಜ್ಞಾನಿಗಳು 1920ರ ದಶಕದ ಅಂತ್ಯಭಾಗದಲ್ಲಿ ಧೂಮಪಾನ ಮತ್ತು ಶ್ವಾಸಕೋಶದ ಕ್ಯಾನ್ಸರ್ ನಡುವಿನ ಸಂಬಂಧವನ್ನು ಪತ್ತೆಹಚ್ಚಿದ್ದರಿಂದ ಆಧುನಿಕ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಧೂಮಪಾನ–ವಿರೋಧಿ ಚಳವಳಿ ಆರಂಭವಾಯಿತು. ಆದರೆ, ಈ ಚಳವಳಿಯು ಎರಡನೇ ವಿಶ್ವ ಮಹಾ ಸಮರದ ಸಮಯದಲ್ಲಿ ವಿರೋಧಪಕ್ಷಗಳನ್ನು ತಲುಪದೇ ಹೋದ ಕಾರಣದಿಂದಾಗಿ ದುರ್ಬಲಗೊಂಡು ಬಹುಬೇಗನೆ ಜನಪ್ರಿಯತೆ ಕಳೆದುಕೊಂಡಿತು. 1980ರ ದಶಕದಲ್ಲಿ ದೊರಕಿದ ವೈಜ್ಞಾನಿಕ ಸುಳಿವಿನಿಂದ ಚಳವಳಿಗೆ ಪುನಃ ಜೀವ ಬಂತು.

**ವಿಶ್ವ ಪರಿಸರ ದಿನ (ಜೂನ್ 5):** ವಿಶ್ವ ಸಂಸ್ಥೆ ಮಹಾಸಭೆಯಿಂದ (United Nations General Assembly) 1972ರಿಂದ ಪ್ರಾರಂಭವಾಗಿ ವಿಶ್ವ ಪರಿಸರ ದಿನವನ್ನು ಪ್ರತಿ ವರ್ಷ ಜೂನ್ 5 ರಂದು ವಿಶ್ವದೆಲ್ಲೆಡೆ ಆಚರಿಸಲಾಗುತ್ತದೆ. ಅಂದು ಪರಿಸರದ ಬಗ್ಗೆ ಸಮಾಜಗಳಲ್ಲಿ ಅರಿವು ಮೂಡಿಸುವ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಪ್ರಪಂಚದಾದ್ಯಂತ ಗಿಡ ನೆಡುವ ಮೂಲಕ ಪರಿಸರ ಆಂದೋಲನಗಳೂ ಜರುಗುತ್ತವೆ.

**ವಿಶ್ವ ಮಧುಮೇಹ ದಿನ (ಜೂನ್ 22):** ವಯೋಮಾನದ ಅಂತರವಿಲ್ಲದೇ ವೇಗದ ಜೀವನಶೈಲಿಗೆ ಬಹುಬೇಗ ಆವರಿಸಿಕೊಳ್ಳುತ್ತಿರುವ ಮಧುಮೇಹವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಅರಿವು ಮೂಡಿಸುವ ಸಂಬಂಧ ಪ್ರತಿವರ್ಷ ಜೂನ್ 22ರಂದು ಜಗತ್ತಿನಾದ್ಯಂತ ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಮಧುಮೇಹ ಒಕ್ಕೂಟದ ಆಶ್ರಯದಲ್ಲಿ 1991ರಲ್ಲಿ ಮೊಟ್ಟಮೊದಲ ಬಾರಿಗೆ ಈ ದಿನವನ್ನು ಆಚರಿಸಲಾಯಿತು.

**ವಿಶ್ವ ಮಾದಕ ವಸ್ತು ಹಾಗೂ ಅಕ್ರಮ ಸಾಗಾಣಿಕೆ ನಿಷೇಧ ದಿನ (ಜೂನ್ 26):** ಮಾದಕ ವಸ್ತುಗಳಿಂದ ಆಗುತ್ತಿರುವ ದುಷ್ಪರಿಣಾಮಗಳ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. 1988ರಲ್ಲಿ ಚೀನಾ ದೇಶದಲ್ಲಿ ಮೊದಲಿಗೆ ಈ ದಿನವನ್ನು ಆಚರಿಸಲಾಯಿತು. ವರ್ಷವೊಂದಕ್ಕೆ 300 ದಶಲಕ್ಷ ಅಮೇರಿಕನ್ ಡಾಲರ್ಗೂ ಅಧಿಕವಾಗಿ ಮಾದಕ ವಸ್ತುಗಳ ಅಕ್ರಮ ಸಾಗಾಟ ನಡೆಯುತ್ತಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಇಂಥದ್ದೊಂದು ದಿನವನ್ನು ಆಚರಿಸಲಾಯಿತು. ಮಾದಕ ವಸ್ತುಗಳನ್ನು ಅಕ್ರಮವಾಗಿ ಸಾಗಾಟ ಮಾಡಿದರೆ ಏನೆಲ್ಲ ಸಮಸ್ಯೆ ಎದುರಿಸಬೇಕಾಗುತ್ತದೆ ಎಂಬ ಬಗ್ಗೆಯೂ ಈ ದಿನ ಅರಿವು ಮೂಡಿಸಲಾಗುತ್ತದೆ.

## ಆರೋಗ್ಯವೆ ಭಾಗ್ಯ–ಬೀಟ್‌ರೂಟ್

ನಿಮ್ಮ ಆಹಾರದಲ್ಲಿ ಈ ತರಕಾರಿಯನ್ನು ಆಗಾಗ್ಗೆ ಉಪಯೋಗಿಸುವಿರೇ? ಬೀಟ್‌ರೂಟ್ ನಮ್ಮ ಆಹಾರಕ್ಕೆ ತರಕಾರಿಯಾದರೆ, ಮತ್ತೊಂದು ರೀತಿಯಲ್ಲಿ ಆರೋಗ್ಯಕ್ಕೆ ಅನುಕೂಲಕರವಾದ ಔಷಧಿಯಾಗಿದೆ. ಇದನ್ನು ಸಲಾಡ್, ಪಲ್ಯ ಅಥವಾ ರಸದ ರೂಪದಲ್ಲಿ, ಅಷ್ಟೇ ಏಕೆ ಸಿಹಿ ತಿನಿಸಿನ ಹಲ್ವಾ ಆಗಿಯೂ ಸೇವಿಸಬಹುದು. ಬೀಟ್‌ರೂಟ್ ನಮ್ಮ ದಿನನಿತ್ಯದ ಆಹಾರವಾದಲ್ಲಿ ಇದರಿಂದ ಹಲವಾರು ಬಗೆಯ ಪ್ರಯೋಜನಗಳಿವೆ.



**■ರಕ್ತದ ಒತ್ತಡವನ್ನು ಕಡಿಮೆಗೊಳಿಸುತ್ತದೆ**

ಬೀಟ್‌ರೂಟ್ ಸೇವನೆಯಾದಾಗ, ದೇಹದಲ್ಲಿ ಇದು ನೈಟ್ರಿಕ್ ಆಕ್ಸೈಡ್ ಆಗಿ ಪರಿವರ್ತನೆಗೊಳ್ಳುತ್ತದೆ. ಇದು ರಕ್ತನಾಳದಲ್ಲಿ ಸುಲಭ ರಕ್ತಚಲನೆಗೆ ಅನುಕೂಲ ಮಾಡಿಕೊಟ್ಟು ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ.

**■ಕೆಟ್ಟ ಕೊಬ್ಬಿನಂಶವನ್ನು ಕಡಿಮೆಗೊಳಿಸುತ್ತದೆ**

ಬೀಟ್‌ರೂಟ್ ಸೇವನೆಯಿಂದ, ರಕ್ತನಾಳದ ಸುತ್ತ ಎಲ್.ಡಿ.ಎಲ್. ಕೊಬ್ಬಿನಂಶ ಸಂಗ್ರಹವಾಗದಂತೆ ನಿಯಂತ್ರಿಸುವುದರ ಜೊತೆಗೆ ಕೆಟ್ಟ ಕೊಬ್ಬಿನಂಶವನ್ನು ಕಡಿಮೆಗೊಳಿಸುತ್ತದೆ.

**■ಗರ್ಭಿಣಿಗೆ ಸಮತೋಲನ ಆಹಾರ ಈ ಬೀಟ್ ರೂಟ್**

ಗರ್ಭಿಣಿಗೆ ಫೋಲಿಕ್ ಆಸಿಡ್‌ನ ಅವಶ್ಯಕತೆ ಹೆಚ್ಚು. ಬೀಟ್‌ರೂಟ್ ಸೇವನೆಯಿಂದ ಗರ್ಭಿಣಿ ಸ್ತ್ರೀಯ ದೇಹಕ್ಕೆ ಈ ಫೋಲಿಕ್ ಆಸಿಡ್ ಸರಬರಾಜಾಗುತ್ತದೆ. ಇದು ಹುಟ್ಟುವ ಮಗುವಿನ ಬೆನ್ನಿನ ಹಿಂಭಾಗಕ್ಕೆ (ಸ್ಪೈನಲ್ ಕಾರ್ಡ್) ಶಕ್ತಿಯನ್ನು ತುಂಬುತ್ತದೆ.

**■ರಕ್ತಹೀನತೆಯ ದೋಷವನ್ನು ಕಡಿಮೆಗೊಳಿಸುತ್ತದೆ**

ಬೀಟ್‌ರೂಟ್ ಕೆಂಪು ಬಣ್ಣದ್ದಾಗಿರುವುದರಿಂದ ದೇಹದಲ್ಲಿ ನಷ್ಟವಾದ ರಕ್ತದ ಪ್ರಮಾಣವನ್ನು ತುಂಬುತ್ತದೆ. ಇದು ರಕ್ತಹೀನತೆಯ ದೋಷವನ್ನು ಕಡಿಮೆಗೊಳಿಸುತ್ತದೆ. ಬೀಟ್ ರೂಟ್‌ನಲ್ಲಿ ಕಬ್ಬಿಣದ ಅಂಶವೂ ಹೆಚ್ಚಾಗಿದೆ. ಇದು ರಕ್ತದಲ್ಲಿನ ಹೀಮಾಗ್ಲುಟ್ಟಿನ್ ರಚನೆಗೆ ಸಹಾಯಕವಾಗುತ್ತದೆ.

**■ಬೀಟ್ ರೂಟ್ ಕ್ಯಾನ್ಸರ್‌ನಿಂದ ರಕ್ಷಿಸುತ್ತದೆ**

ಬೀಟ್‌ರೂಟ್‌ನಲ್ಲಿನ ಬೆಟಾಸ್ಯಾನಿನ್ ಅಂಶವು ದೇಹದಲ್ಲಿ ದುರ್ಮಾಂಸ ಬೆಳವಣಿಗೆಯನ್ನು ಮಂದಗೊಳಿಸುತ್ತದೆ. ವಿಶೇಷವಾಗಿ ಸ್ತನ ಹಾಗೂ ಜನನೇಂದ್ರಿಯ ಸಂಬಂಧವಾದ ದುರ್ಮಾಂಸ ಬೆಳವಣಿಗೆಯನ್ನು ಮಂದಗೊಳಿಸುತ್ತದೆ.

**■ಮಲಬದ್ಧತೆಯನ್ನು ನಿವಾರಿಸುತ್ತದೆ**

ಬೀಟ್‌ರೂಟ್ ನಾರಿನ ಅಂಶವುಳ್ಳದ್ದಾಗಿರುವುದರಿಂದ ಮಲಬದ್ಧತೆ ಸಮಸ್ಯೆಯನ್ನು ಕಡಿಮೆಗೊಳಿಸುತ್ತದೆ.

**■ಬುದ್ಧಿಶಕ್ತಿಯನ್ನು ಚುರುಕುಗೊಳಿಸುತ್ತದೆ**

ಪ್ರತಿ ದಿನ ಬೀಟ್‌ರೂಟ್ ರಸವನ್ನು ಸೇವಿಸುವುದರಿಂದ ವ್ಯಕ್ತಿಯ ದೇಹಶಕ್ತಿ ವೃದ್ಧಿಸುತ್ತದೆ, ಜೊತೆಗೆ ಬುದ್ಧಿಶಕ್ತಿಯನ್ನು ಚುರುಕುಗೊಳಿಸುತ್ತದೆ.

**ಶ್ರೀ ಡಿ.ಕೆ. ಶಿವಕುಮಾರ್, ಇಂಧನ ಸಚಿವರು, ಎಚ್.ಟಿ. ಗ್ರಾಹಕರೊಂದಿಗೆ ನಡೆಸಿದ ಔಪಚಾರಿಕ ಸಭೆಯ ಕೆಲ ಚಿತ್ರಗಳು. ಶ್ರೀ ಪಂಕಜ್‌ಕುಮಾರ್ ಪಾಂಡೆ, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಶ್ರೀ ಎಸ್. ಸುಮಂತ್, ಪ್ರಸರಣ ನಿರ್ದೇಶಕರು, ಕೆಪಿಟಿಸಿಎಲ್ ಹಾಗೂ ಇನ್ನಿತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.**
















## ಹುಟ್ಟುಹಬ್ಬದ ಶುಭಾಶಯಗಳು


2015ನೇ ವರ್ಷದ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿ ಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗಾಗಿ ಶ್ರಮಿಸಿ 2015ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ 'ಬೆಸ್ಕಾಂ ಸ್ನೇಹಿ'ಯ ಭಾವಪೂರ್ಣ ಅಭಿನಂದನೆ ಹಾಗೂ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**




## ಕವನ...

B - ಬೆಸ್ಕಾಂನ
E - ಇಂದಿನ ಉತ್ತಮ
S - ಸೇವೆ
C - ಕಂಡು
O - ಒಂದು ಕವಿ
M - ಮಾತು ಹೇಳ್ತೀನ್ರಿ

B - ಬೆಸ್ಕಾಂನಲ್ಲಿ
E - ಈ ಬ್ಯಾಸಿಗೆ ತಿಂಗಳಲ್ಲೂ
S - ಸಹ
C - ಕರೆಂಟು
O - ಒಂದಿಷ್ಟೂ ಹೋಗಾಂಗೆ
M - ಮಾಡಲ್ವಂತೆ

● ಶ್ರೀ ಸಿ.ಆರ್. ವಿಜಯದೇವ್,
ನಿವೃತ್ತ ಪ್ರಧಾನ ವ್ಯವಸ್ಥಾಪಕರು


## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎನ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್‌ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ.ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:

**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ಬೆಸ್ಕಾಂ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**
**ಸಂದೇಶ ಕಳುಹಿಸಿ: 9243150000 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806